ಕ್ರಿಮಿನಲ್ ಮಿಸ್. ನಂ **40/2023**

ಅರ್ .ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **20-06-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಅರ್ಜಿದಾರರ ಪರ ಶ್ರೀ ಎಂ ವಿ ಟಿ ವಕೀಲರಿಂದ-

ನನಗೆ ಮದುವೆಯಾಗಿದೆ. ನನ್ನ ಹೆಂಡತಿಯ ಹೆಸರು ದೀಪಾವತಿ/ಅರ್ಜಿದಾರ ನಂಃ **1** ರವರು ಆಗಿರುತ್ತಾರೆ. ನನಗೆ ಒಬ್ಬಳು ಮಗಳು ಇರುತ್ತಾಳೆ. ದಿಃ **12.02.2015** ರಂದು ನಾನು ಹುಬ್ಬಳ್ಳಿಯಲ್ಲಿ ಅರ್ಜಿದಾರ ನಂಃ **1** ರವರನ್ನು ಮದುವೆಯಾಗಿರುತ್ತೇನೆ. ಸದರಿಯು ಅರೇಂಜ್ ಮ್ಯಾರೇಜ್ ಆಗಿರುತ್ತದೆ. ಮದುವೆಯಾದ ನಂತರ ನಾನು ಮತ್ತು ಅರ್ಜಿದಾರ ನಂಃ **1** ನನ್ನ ತಂದೆ ತಾಯಿಯ ಜೊತೆ ನಾನು ಜೀವನ ನಡೆಸುತ್ತಿದ್ದೆ. ಮದುವೆಯಾದ ಮೂರು ತಿಂಗಳ ನಂತರ ಅರ್ಜಿದಾರ ನಂಃ **1** ರವರು ಅವರ ತವರು ಮನೆಗೆ ಹೋಗಿದ್ದರು. ಆದಾದ ನಂತರ ಅವರು **2022** ನೇ ಇಸವಿಯಲ್ಲಿ ಮಾತ್ರ ವಾಪಸ್ಸು ನನ್ನ ಬಳಿ ಬಂದು ಬೇರೆ ಮನೆ ಮಾಡಬೇಕು ಎಂದು ಕೇಳಿದರು. ಹುಬ್ಬಳ್ಳಿಯ ದೇವಾಂಗಪೇಟೆ, ರಾಜಾಜಿ ನಗರದಲ್ಲಿ ನಾನು ಬೇರೆ ಮನೆ ಮಾಡಿ ಅರ್ಜಿದಾರ ನಂಃ **1** ರವರ ಜೊತೆ ವಾಸಮಾಡುತ್ತಿದ್ದೆ. ನನ್ನ ಮನೆಯವರು ಅರ್ಜಿದಾರ ನಂಃ **1** ರವರಿಗೆ ಕಿರುಕುಳ ನೀಡುತ್ತಿದ್ದಾರೆ ಎಂಬ ಕಾರಣಕ್ಕೆ ಅವರು ಮನೆಯಿಂದ ಹೋಗಿದ್ದರು ಎಂದು ಹೇಳುತ್ತಿರುವುದು ಸುಳ್ಳು.

ಹುಬ್ಬಳ್ಳಿ ನ್ಯಾಯಾಲಯದಲ್ಲಿ ಕೌಟುಂಬಿಕ ದೌರ್ಜನ್ಯ ಎಸೆಗಿರುತ್ತೇನೆ ಎಂದು ನನ್ನ ವಿರುದ್ಧ ಪ್ರಕರಣ ದಾಖಲಾಗಿದೆ ಎಂದರೆ ಸರಿ. **2016** ನೇ ಇಸವಿಯಿಂದ **2022** ರವರೆಗೆ ಪ್ರತಿ ವರ್ಷ ನಾನು ಅರ್ಜಿದಾರ ನಂಃ **1** ರವರ ತವರು ಮನೆಗೆ ಹೋಗಿ ಅವರ ಮನಒಲಿಸಲು ಪ್ರಯತ್ನ ಮಾಡುತ್ತಿದ್ದೆ ಆದರೆ ಅವರು ಒಪ್ಪುತ್ತಿರಲಿಲ್ಲ. ಸಾಕ್ಷಿ ಮುಂದುವರೆದು **2022** ನೇ ಇಸವಿಯಲ್ಲಿ ಅರ್ಜಿದಾರ ನಂಃ **1** ರವರು ಮಾತ್ರ ನನ್ನ ಮನೆಗೆ ಬಂದಿದ್ದರು, ಮಗುವನ್ನು ಕರೆದುಕೊಂಡು ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಅರ್ಜಿದಾರ ನಂಃ **1** ರವರ ಮನಒಲಿಸಲು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಅರ್ಜಿದಾರರೆ ಖುದ್ದಾಗಿ **2022** ನೇ ಇಸವಿಯಲ್ಲಿ ನನ್ನ ಮನೆಗೆ ಬಂದಿದ್ರು ಎಂದರೆ ಸಾಕ್ಷಿ ನನ್ನ ಪ್ರಯತ್ನದಿಂದ ಅವರು ನನ್ನ ಜೊತೆ ಇರಲು ಒಪ್ಪಿದರು, ನಾನೇ ಬೇರೆ

ಮನೆಯನ್ನು ಹೂಡುಕಿದೆ ಆಗ ಸದರಿ ಅರ್ಜಿದಾರ ನಂಃ 1 ರವರು ತಂದೆ ಸಹ ಬಂದಿದ್ದರು ಎಂದು ನುಡಿಯುತ್ತಾರೆ.

ನನ್ನ ಮಗಳು ಹೊಸಪೇಟೆಯಲ್ಲಿ ಅಂದರೆ ಅರ್ಜಿದಾರ ನಂಃ 1 ರವರ ತವರೂರಿನಲ್ಲಿ ಜನಿಸಿರುತ್ತಾರೆ. ಡೆಲಿವರಿ ಖರ್ಚನ್ನು ನಾನು ಮತ್ತು ಅರ್ಜಿದಾರ ನಂಃ 1 ರವರ ತಂದೆ ಸಮನಾಗಿ ಹಂಚಿಕೊಂಡಿರುತ್ತೇವೆ. ಏಕಾಏಕೀ ಹುಬ್ಬಳ್ಳಿಗೆ ಬಂದರೆ ಮಗು ಇನ್ನೂ ಚಿಕ್ಕವಳಿದ್ದರಿಂದ ತೊಂದರೆಯಾಗುತ್ತದೆ ಎಂದು 2022 ನೇ ಇಸವಿಯಲ್ಲಿ ಸ್ವಲ್ಪ ದಿನದ ಮಟ್ಟಿಗೆ ಅರ್ಜಿದಾರ ನಂಃ 1 ರವರು ಮಾತ್ರ ಬಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಮನೆ ಮಾಡಿದರೆ ಮಗುವನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದರು ಆದರೆ ಮಾತಿಗೆ ನಿಲ್ಲಲ್ಲಿ ಎಂದು ನುಡಿಯುತ್ತಾರೆ. ನಾನು ಮಗುವಿನ ಕಾಳಜಿ ಮಾಡಲು ಅರ್ಜಿದಾರ ನಂಃ 1 ರವರಿಗೆ ಸಹಾಯ ಮಾಡದೆ ಇದ್ದರಿಂದ ಅವರು ಮಗುವನ್ನು ಕರೆದುಕೊಂಡು ಬರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹುಬ್ಬಳ್ಳಿಯಲ್ಲಿ ಮಗಳನ್ನು ಶಾಲೆಗೆ ಹಾಕಲು ಇಂರ್ಟವ್ಯೂ ಸಹ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಹುಬ್ಬಳ್ಳಿಯಲ್ಲಿ ಮಾಡಿದ ಬೇರೆ ಮನೆಯಲ್ಲಿ ಎಪ್ರೀಲ್ 2022 ರಿಂದ ದಿಃ 14.04.2023 ರವರೆಗೆ ಇದ್ದರು.

ನನಗೆ ನನ್ನ ಹೆಂಡತಿ ಮತ್ತು ಮಗಳು ಬೇಕು ಎಂದರೆ ಸರಿ. ಹೊಸಪೇಟೆಯ ಹಿರಿಯ ದರ್ಜೆ ನ್ಯಾಯಾಲಯದಲ್ಲಿ ಅರ್ಜಿದಾರ ನಂಃ 1 ರವರು ರೆಸ್ಟಿಟ್ಯೂಷನ್ ಆಫ್ ಕಾಜಿಂಗಲ್ ರೈಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾನು ಹೆಂಡತಿ ಮಗಳ ಜೊತೆ ಜೀವನ ಮಾಡಲು ಆದೇಶ ಆಗಿದೆ ಎಂದರೆ ಸಾಕ್ಷಿ ನಾನು ಈ ಪ್ರಕರಣದಲ್ಲಿ ಅರ್ಜಿದಾರರಿಗೆ ನನ್ನ ಜೊತೆ ಬಂದು ಜೀವನ ಮಾಡಲು ಮೆಮೋ ಸಲ್ಲಿಸಿದ್ದು ಆದರೆ ಅವರು ಸೆಕ್ಯೂರಿಟಿ ಕೇಳಿದ್ದರು ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹೊಸಪೇಟೆಯ ಹಿರಿಯ ದರ್ಜೆ ನ್ಯಾಯಾಲಯದಲ್ಲಿ, ಎಕ್ಸಿಕ್ಯೂಷನ್ ಅರ್ಜಿಯನ್ನು, ಈ ಪ್ರಕರಣದ ಅರ್ಜಿದಾರ ನಂಃ 1 ರವರು ಸಲ್ಲಿಸಿರುತ್ತಾರೆ, ಆದರೆ ನಾನು ಅದರಲ್ಲಿ ನ್ಯಾಯಾಲಯದ ಮುಂದೆ ಹಾಜರಾಗುತ್ತಿಲ್ಲ ಎಂದರೆ ಸಾಕ್ಷಿ ನನ್ನ ಜೊತೆ ಬರಲು ಸೆಕ್ಯೂರಿಟಿ ಕೇಳುತ್ತಿದ್ದಾರೆ ಹಾಗೂ

ತಂದೆ ತಾಯಿ ಜೊತಗೆ ಇರಬಾರದು ಎಂದು ಕೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಅರ್ಜಿದಾರ ನಂಃ 1 ರವರನ್ನು ಸಾಕಲು ನೀವು ಯಾವ ವ್ಯವಸ್ಥೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ಬಂದರೆ ನಾನು ವ್ಯವಸ್ಥೆ ಮಾಡುತ್ತೇನೆ ಎಂದು ನುಡಿಯತ್ತಾರೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಹೊಸಪೇಟೆ.